ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 21.11.2024.

**ಪಾಟೀ ಸವಾಲು – ಪ್ರತಿವಾದಿ ಪರಃ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನ್ನ ಜಾಗೆಯಲ್ಲಿ ಗೋಡೆ ಕಟ್ಟಿರುವುದರಿಂದ ಈ ಪ್ರಕರಣ ದಾಖಲಿಸಿರುತ್ತೇನೆ. ನಮ್ಮ ಮನೆಯ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಎರಡು ಎರಡು ಮನೆಗಳು ಇವೆ ಎಂದರೆ ಸರಿ. ನಮ್ಮ ಮನೆ ಅದರ ಮಧ್ಯೆ ಇದೆ ಎಂದರೆ ಸರಿ. ಪ್ರತಿವಾದಿಯ ಮನೆ ನಮ್ಮ ಮನೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ನಮ್ಮ ಮನೆಯ ಅಳತೆ ನನಗೆ ಹೇಳಲು ಬರುವುದಿಲ್ಲಾ. ನಮ್ಮ ಮನೆಯ ಸುತ್ತ ಮುತ್ತ ಮನೆಯ ಅಳತೆಗಳು ಹೇಳಲು ಬರುವುದಿಲ್ಲಾ. ಪ್ರತಿವಾದಿ ಅತೀಕ್ರಮಣ ಮಾಡಿದ ಬಗ್ಗೆ ಪಂಚಾಯತಿದವರು ಅಳತೆ ಮಾಡಿರುತ್ತಾರೆ. ಈ ಬಗ್ಗೆ ನಕಾಶೆ ಹಾಜರುಪಡಿಸಿದ್ದೇನೆ. ಸದರಿ ನಕಾಶೆಯನ್ನು ನನ್ನ ಗಂಡ ತಯಾರು ಮಾಡಿರುತ್ತಾರೆ. ನಾವು ಹಾಜರುಪಡಿಸಿದ ನಕಾಶೆ ಯಾವುದೇ ಅಧಿಕಾರಿಯಿಂದ ತಯಾರು ಮಾಡಿ ಹಾಕಿಲ್ಲಾ ಅಂದರೆ ಸರಿ. ನಾನು ಹಾಜರುಪಡಿಸಿದ ಹಾತ ನಕಾಶೆ ಸರಿಯಾಗಿ ಇಲ್ಲಾ ಎಂದರೆ ಸರಿಯಲ್ಲಾ. ನಾನು ಹಾಜರು ಮಾಡಿದ ಹಾತ ನಕಾಶೆ ನಾವೇ ಸೃಷ್ಟಿಸಿಕೊಂಡು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲಾ. ನನ್ನ ಹಾತ ನಕಾಶೆಯಲ್ಲಿ ನಮ್ಮ ಮನೆ ದಕ್ಷಿಣಕ್ಕೆ ತೋರಿಸಿರುತ್ತೇನೆ. ಪ್ರತಿವಾದಿಯ ಆಸ್ತಿಯನ್ನು ಉತ್ತರಕ್ಕೆ ತೋರಿಸಿರುತ್ತೇನೆ. ನಾನು ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಇರುವ ಬೇರೆಯವರನ್ನು ಪಾಟೀ ಮಾಡಿಲ್ಲಾ ಎಂದರೆ ಸರಿ. ನಾನು ಹಾಜರುಪಡಿಸಿದ ಇ, ಎಫ್, ಡಿ ತೋರಿಸಿದ ಜಾಗೆ ಒತ್ತುವರಿ ಮಾಡಿದ ಬಗ್ಗೆ ಸಂಬಂದ ಪಟ್ಟ ಅಧಿಕಾರಿಯಿಂದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಉತ್ತರಕ್ಕೆ ಮುಖ ಮಾಡಿ ಮನೆ

ಇದ್ದರೆ 3 ಪೂಟ್ ಜಾಗ ಬಿಡಬೇಕಾಗುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು 2 ಪೂಟ್ ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಉತ್ತರ ಬಾಗಕ್ಕೆ ಯಾವುದೇ ಜಾಗ ಬಿಟ್ಟಿಲ್ಲಾ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಅದೇ ಜಾಗೆ ಎಂದು ನುಡಿಯುತ್ತಾರೆ.

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಆದೇಶಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.